ಹೆಜ್ಜೆ ಗುರುತು

ಮಹಿಳಾದಿನ ವಿಶೇಷ

# ಸಾಧಕಿಯರಿಗೆ ನಮಸ್ಕಾರ

ವಿಶ್ವದ ಹಲವು ಆವಿಷ್ಕಾರಗಳಲ್ಲಿ ಮಹಿಳೆಯರ ಮೊದಲ ಹೆಜ್ಜೆಯಿದೆ. ಮನುಕುಲಕ್ಕೆ ಇಂದಿಗೂ ದಾರಿದೀಪವಾಗಿರುವ ಈ ಸಂಶೋಧನೆಗಳ ಹಿಂದೆ ಅವರ ಅನನ್ಯ ಕೊಡುಗೆಯಿದೆ. ಅಂಥ ಕೆಲವು ಮಹಿಳಾ ವಿಜ್ಞಾನಿಗಳ ಪರಿಚಯ ಇಲ್ಲಿದೆ...

■ ಸಂಗ್ರಹ: **ಕೆ.ಎಸ್‌. ಸೋಮೇಶ್ವರ**

ಚಿತ್ರಕೃಪೆ: ವಿಕಿಕಾಮನ್ಸ್

## ಮೇರಿ ಆಂಡರ್ಸನ್ (1866-1953)



ಮೇರಿ, ಅಮೆರಿಕದ ಅಲಬಾಮಾದಲ್ಲಿ ರಿಯಲ್ ಎಸ್ಟೇಟ್ ಉದ್ಯಮಿಯಾಗಿದ್ದವರು. ಚಳಿಗಾಲದಲ್ಲೊಮ್ಮೆ ನ್ಯೂಯಾರ್ಕ್ ನಗರಕ್ಕೆ ಭೇಟಿ ನೀಡಿದ್ದ ಸಂದರ್ಭ ಟ್ರಾಲಿ ಕಾರ್ ಏರಿದ್ದರು. ಕಾರಿನ ಮೇಲೆ ಆವರಿಸಿದ ಮಂಜಿನಿಂದಾಗಿ ಮುಂದಿನ ದಾರಿ ಕಾಣದೇ ಚಾಲಕ ಒದ್ದಾಡುತ್ತಿದ್ದ. ಕಾರಿನಿಂದ ಇಳಿದು ಆಗಾಗ್ಗೆ ಗಾಜನ್ನು ಒರೆಸಿ ಮತ್ತೆ ಬಂದು ಕೂರುತ್ತಿದ್ದ. ಇದನ್ನು ಕಂಡಿದ್ದ ಮೇರಿಗೆ ಈ ಅವಕಾಶವನ್ನು ಬಳಸಿಕೊಂಡು ಸಣ್ಣ ಉದ್ಯಮ ಶುರು ಮಾಡುವ ಐಡಿಯಾ ಹೊಳೆಯಿತು.

ಅಲಬಾಮಾಗೆ ಮರಳುತ್ತಿದ್ದಂತೆ ಆಟೊಮೊಬೈಲ್ ವಿನ್ಯಾಸಕರನ್ನು ವಿಂಡ್‌ಶೀಲ್ಡ್ ವಿನ್ಯಾಸಕ್ಕೆ ನೇಮಿಸಿಕೊಳ್ಳುವ ಜೊತೆಗೆ, ಅದರ ಉತ್ಪಾದನೆಗೆಂದು ಸ್ಥಳೀಯ ಕಂಪನಿಯ ಜೊತೆ ಒಪ್ಪಂದವನ್ನೂ ಮಾಡಿಕೊಂಡರು. ಸತತ ಪ್ರಯತ್ನಗಳೊಂದಿಗೆ ವಿಂಡ್‌ಶೀಲ್ಡ್ ವೈಪರ್ ವಿನ್ಯಾಸಗೊಳಿಸಿ, 1903ರಲ್ಲಿ ಪೇಟೆಂಟ್ ಪಡೆದುಕೊಂಡರು.

ಕಾರಿನೊಳಗೇ ಕೂತು ನಿರ್ವಹಿಸಬಲ್ಲ 'ವಿಂಡೊ ಕ್ಲೀನಿಂಗ್ ಡಿವೈಸ್' ಎಂದೇ ಇದು ಜನಜನಿತವಾಯಿತು. ಪರಿಣಾಮಕಾರಿಯಾದ ವಿಂಡ್‌ಶೀಲ್ಡ್ ಕ್ಲಿಯರಿಂಗ್ ಡಿವೈಸ್ ಎಂದೂ ಕರೆಸಿಕೊಂಡಿತು. ಮುಂದೆ ಎಲ್ಲಾ ಕಾರುಗಳಲ್ಲೂ ವಿಂಡ್‌ಶೀಲ್ಡ್ ಒಂದು ಅಗತ್ಯ ಸೌಲಭ್ಯವೇ ಆಯಿತು. ಅಂದಿನ ಆ ಸಂಶೋಧನೆ ಇಂದಿಗೂ ನಮ್ಮ ಕಣ್ಣ ಮುಂದೆಯೇ ಇದೆ.

## ಅನ್ನಾ ಕಾನೊಲಿ



ಕಟ್ಟಡಗಳಲ್ಲಿ ಆಕಸ್ಮಿಕವಾಗಿ ಬೆಂಕಿ ಕಾಣಿಸಿಕೊಂಡರೆ ಏನು ಮಾಡುವುದು? ಇದಕ್ಕೆಂದು ಈಗ ಹಲವು ಸಾಧನಗಳಿವೆ. ಆಕಸ್ಮಿಕ ಬೆಂಕಿಯಿಂದ ಅನಾಹುತ ತಪ್ಪಿಸಲು ಮುಂಜಾಗ್ರತಾ ನಿಯಮಗಳನ್ನು ಪಾಲಿಸಲಾಗುತ್ತದೆ. ಆದರೆ 1870ರ ಕಾಲದಲ್ಲೇ ಇದಕ್ಕಾಗಿ ತಂತ್ರ ಕಂಡುಹಿಡಿದ ಖ್ಯಾತಿ ಅನ್ನಾ ಕಾನೊಲಿ ಅವರದ್ದು. ಪುರುಷರ ಸಹಾಯವಿಲ್ಲದೇ ಅಮೆರಿಕದಲ್ಲಿ ಪೇಟೆಂಟ್ ಸಲ್ಲಿಸಿದ ಮೊದಲ ಮಹಿಳೆ ಎಂದೂ ಇವರು ಹೆಸರಾದರು.

ಪೆನ್ಸಿಲ್ವೇನಿಯಾದ ಮಹಿಳೆ ಅನ್ನಾ ಅವರು, ಬಹುಮಹಡಿ ಕಟ್ಟಡಗಳಲ್ಲಿ ಬೆಂಕಿ ಆಕಸ್ಮಿಕಗಳಿಂದ ಜನರನ್ನು ಪಾರು ಮಾಡಲು ಅಗ್ನಿತಾರಕ (Fire escape) ಎಂಬ ವಿನ್ಯಾಸ ತಂತ್ರ ಕಂಡುಹಿಡಿದವರು. ಅಗ್ನಿಯಿಂದ ತಪ್ಪಿಸಿಕೊಂಡು ಸುರಕ್ಷಿತವಾಗಿರುವ ಸ್ಥಳಕ್ಕೆ ಆದಷ್ಟು ಬೇಗನೆ ತಲುಪುವ ವಿನ್ಯಾಸ ಅದಾಗಿತ್ತು. ಹಿಡಿ ಇರುವ ಲೋಹದ ಏಣಿಗಳನ್ನು ಕಟ್ಟಡದಲ್ಲಿ ಬಳಸುವ ಈ ವಿನ್ಯಾಸ ತಂತ್ರ ಜನಪ್ರಿಯತೆ ಪಡೆದು ಹಲವಾರು ಕಟ್ಟಡಗಳಲ್ಲಿ ಅಳವಡಿಸಲಾಯಿತು. ಅವರ ಅಂದಿನ ಮುಂದಾಲೋಚನೆಯ ಆವಿಷ್ಕಾರದ ನೆರಳನ್ನು ಇಂದಿಗೂ ಎಲ್ಲ ಕಟ್ಟಡಗಳಲ್ಲೂ ಕಾಣುತ್ತಿದ್ದೇವೆ.



## ಬೆಟ್ ನೆಸ್ಮಿತ್ ಗ್ರಹಾಂ (1924-1980)

ಬೆಟ್ ಅಮೆರಿಕದ ಬೆರಳಚ್ಚುಗಾರ್ತಿ. ವರ್ಣ ಚಿತ್ರಕಾರಿಣಿ ಕೂಡ ಆಗಿದ್ದರು. ಕಂಪ್ಯೂಟರ್ ಯುಗದ ಮೊದಲಿಗೆ ಬೆರಳಚ್ಚು ಯಂತ್ರಗಳು ವಿಶ್ವದ ಮೂಲೆಮೂಲೆಯಲ್ಲೂ ಇದ್ದವು. ಅವುಗಳ ಶಬ್ದ ಪ್ರತಿ ಕಚೇರಿಯಲ್ಲೂ ಮಾರ್ದನಿಸುತ್ತಿತ್ತು. ಹಾಗೇ, ಟೈಪಿಸುವಾಗ ತಪ್ಪುಗಳು ಸಾಮಾನ್ಯವಾಗಿರುತ್ತಿದ್ದವು. ಆ ತಪ್ಪುಗಳನ್ನು ತಿದ್ದಲು ಉಜ್ಜುಗಗಳ ಬಳಕೆಯಿದ್ದರೂ, ಅದು ಕಾಗದದ ಮೇಲೆ ಕಪ್ಪು ಛಾಯೆ ಮೂಡಿಸುತ್ತಿತ್ತು. ಹೀಗಾಗಿ ತಪ್ಪಾದಾಗ ಅದನ್ನು ಅಳಿಸಲಾಗದೆ ಇಡೀ ಹಾಳೆಯನ್ನು ಮತ್ತೊಮ್ಮೆ ಟೈಪ್ ಮಾಡಬೇಕಾಗಿತ್ತು.

ಇದನ್ನು ತಪ್ಪಿಸಲು ಬೆಟ್, ತಂತ್ರವೊಂದನ್ನು ಹೂಡಿದರು. ತಾವು ಚಿತ್ರಗಳನ್ನು ಬಿಡಿಸಲು ಬಳಸುತ್ತಿದ್ದ ಬಿಳಿ ಬಣ್ಣವನ್ನು ನೀರಿನಲ್ಲಿ ತೆಳು ಮಾಡಿಕೊಂಡು ಕಾಗದದ ಮೇಲೆ ತಪ್ಪಾದ ಭಾಗಕ್ಕೆ ಬಳಿಯುತ್ತಿದ್ದರು. ಅದು ಒಣಗಿದ ಮೇಲೆ ಅಲ್ಲಿ ಸರಿಯಾದ ಪದ ಮೂಡಿಸುತ್ತಿದ್ದರು. ಈ ತಿದ್ದುಪಡಿ ದ್ರವಕ್ಕೆ (correction fluid) ಜನ್ಮ ಕೊಟ್ಟ ಈ ಮಹಿಳೆಯನ್ನು 'ಇನ್ವೆಂಟರ್ ಆಫ್ ದಿ ಲಿಕ್ವಿಡ್ ಪೇಪರ್' ಎಂದೇ ಕರೆಯಲಾಯಿತು. 1956ರಲ್ಲಿ 'ಮಿಸ್ಟೇಕ್ ಔಟ್' ಹೆಸರಿನಲ್ಲಿ ಪರಿಚಿತಗೊಂಡು, 1958ರಲ್ಲಿ ಪೂರ್ಣಪ್ರಮಾಣದ 'ಲಿಕ್ವಿಡ್ ಪೇಪರ್' ಮಾರುಕಟ್ಟೆಗೆ ಬಂತು. ಈ ಒಂದು ದ್ರಾವಣ ಪ್ರಪಂಚದಾದ್ಯಂತ ಎಲ್ಲ ಬೆರಳಚ್ಚುಗಾರರ ಅಚ್ಚುಮೆಚ್ಚಿನ ಸಂಗಾತಿಯಾಗಿ, ದಶಕಗಳ ಕಾಲ ಇತ್ತು. ಜೊತೆಗೆ 20ನೇ ಶತಮಾನದ ಪ್ರಸಿದ್ಧ ಸಂಶೋಧಕಿಯಾಗಿಯೂ ಬೆಟ್ ಗುರುತಿಸಿಕೊಂಡರು.

ಮುಂದಿನ 10 ವರ್ಷಗಳಲ್ಲಿ ಬೃಹತ್ ಮಟ್ಟದಲ್ಲಿ ಇದರ ಉತ್ಪಾದನೆಯಾಗಿ ದೊಡ್ಡ ಕಂಪನಿಯಾಗಿ ಬೆಳೆಯಿತು. ಉತ್ಪಾದನಾ ಘಟಕವನ್ನೂ ಸ್ಥಾಪಿಸಲಾಯಿತು. ಇದೇ ದ್ರಾವಣ ಮುಂದೆ ಪೇಸ್ಟ್ ಆಗಿ, ಈಗಲೂ ಕೆಲವೊಮ್ಮೆ ಕೈ ಬರಹಗಳ ತಿದ್ದುಪಡಿಗೆ ಬಳಕೆಯಾಗುವ ಕರೆಕ್ಷನ್ ಟೇಪ್ ಆಗಿ ಬಳಕೆಯಲ್ಲಿದೆ.